# ಮಿಂಚುಹುಳು ಮತ್ತು ನಾನು

■ **ಕರ್ಣಂ ಸಂಧ್ಯಾ**

ಕಲೆ: ಸಂತೋಷ್ ಸಸಿಹಿತ್ಲು



ಕತ್ತಲು ತುಂಬಿದ ವೇಳೆಯಲಿ
ಗಿಡಗಳ ಪೊದೆಗಳ ಸಂದಿಯಲಿ
ಟಾರ್ಚನು ಹಿಡಿದು ಕೈಗಳಲಿ
ಓಡುವರ್‍ಯಾರು ಹೇಳಮ್ಮಾ?

ರಾತ್ರಿಯ ವೇಳೆ ದೀಪವ ಹಿಡಿದು
ತಮ್ಮಷ್ಟಕ್ಕೆ ಹೊರಟಿಹರು
ಕರೆಯಲು ಒಮ್ಮೆಯು ಓಗೊಡದವರು
ಕೂಗಲು ನಿಲ್ಲರು ಯಾಕಮ್ಮಾ?

ದೀಪದ ಹಾಗೆ ಕಾಣ್ಬುದು ಕಂದ
ದೀಪವಲ್ಲವದು ನೀ ಕೇಳು
ಒಡಲಲಿ ಬೆಳಕನು ಇರಿಸಿ ಹರ್‍ವುದು
ಅದರ ಹೆಸರೇ ಮಿಂಚುಹುಳು

ಹುಳುವೆಂದರಿತ ಪುಟಾಣಿ ಕಿಟ್ಟು
ಓಡಿದ ಹುಳುವನು ಹಿಡಿಯಲು
ಕಣ್ಣಿಗೆ ಕಂಡರೂ ಸಿಗದಾ ಹಾಗೆ
ಹಾರೇ ಹೋಯಿತು ಮಿಂಚುಹುಳು ■

## ಕುಂಚ ಪ್ರಪಂಚ






**ನಿರೀಕ್ಷಾ ಆನಂದ್**
ಯುಕೆಜಿ, ಸಾಯಿ ನಳಂದ
ಸೆಂಟ್ರಲ್ ಸ್ಕೂಲ್,
ಕೆ.ಆರ್.ನಗರ





**ಸಿಂಚನಾ ಕುಲಕರ್ಣಿ**
2ನೇ ತರಗತಿ, ಶ್ರೀ ಕುಮಾರನ್ಸ್
ಚಿಲ್ಡ್ರನ್ಸ್ ಹೋಮ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

ವಿಳಾಸ: **editorsu@sudha.co.in**